ಟೀಮನ್ನು ಕಳುಹಿಸಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ರಘುಪತಿ ಭಟ್‌ರವರು ಹೇಳಿದ್ದಾರೆ. ಈ ಇಲಾಖೆಗೆ ನಾವು ಇನ್ನೂ ಸಚಿವರನ್ನು ನೇಮಕ ಮಾಡಿಲ್ಲ. ಈ ಖಾತೆ ಮುಖ್ಯಮಂತ್ರಿಗಳ ಹತ್ತಿರವೇ ಇದೆ. ಆದ್ದರಿಂದ, ನಾನು ಮುಖ್ಯಮಂತ್ರಿಗಳಿಗೆ ಈ ವಿಚಾರವನ್ನು ಇವತ್ತೇ ತಿಳಿಸಿ, ಸಂಬಂಧಪಟ್ಟ ಅಧಿಕಾರಿಗಳಿಂದ ವರದಿಗಳನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳುವಂಥ ಭರವಸೆಯನ್ನು ಕೊಡುವುದರ ಜೊತೆಗೆ ಅಲ್ಲಿಯ ಮೀನುಗಾರರಿಗೆ ಆಗಿರುವಂಥ ತೊಂದರೆ ಮತ್ತು ಅವರಿಗೆ ನೀಡಬೇಕಾಗಿರುವಂಥ ರಕ್ಷಣೆ ಇವೆರಡರ ಬಗ್ಗೆಯೂ ನಾನು ಪ್ರಸ್ತಾಪ ಮಾಡಿ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಸೀಬರ್ಡ್ ಯೋಜನೆ ಬಗ್ಗೆ ಅವರು ಹೇಳಿದ್ದಾರೆ. ಸೀಬರ್ಡ್ ಯೋಜನೆಯಿಂದ ಆಗುತ್ತಿರುವಂತ ತೊಂದರೆಗಳು, ಇತ್ಯಾದಿ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ತಾವು ಇದರ ಬಗ್ಗೆ ಸವಿಸ್ತಾರವಾಗಿ ಮಾತನಾಡಿ, ಅಧಿವೇಶನ ಮುಗಿದ ನಂತರ ನಾನು ಸೀಬರ್ಡ್ ಯೋಜನೆ, ಕಾರವಾರ ಮತ್ತು ಎಂಟ್ಯೆರ್ ಕೋಸ್ಟಲ್ ಏರಿಯಾಗಳಿಗೆ ಭೇಟಿ ನೀಡುತ್ತಿದ್ದೇನೆ. ನಾನೂ ಇದನ್ನು ಗಮನಿಸಿ, ಇದರ ಬಗ್ಗೆ ಆದಷ್ಟು ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳ ಮೂಲಕ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಅಫ್ಜಲ್‌ಪುರ ತಾಲ್ಲೂಕು ಮತ್ತು ಸುರಪುರ ತಾಲ್ಲೂಕಿನಲ್ಲಿ ಅನೇಕಾಲು ರೋಗದಿಂದ.....

ಅಧ್ಯಕ್ಷರು ; ದಯಮಾಡಿ ಸದಸ್ಯರು ಕುಳಿತುಕೊಳ್ಳಬೇಕು.

4.) ಪ್ರಕಟಣೆ

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 9ನೆಯ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ನನ್ನ ಗೈರುಹಾಜರಿಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ನಾಮನಿರ್ದೇಶನ ಮಾಡಿದ್ದೇನೆ.

ಶ್ರೀಯುತರುಗಳಾದ :

1. ಡಿ.ಆರ್. ಪಾಟೀಲ್
2. ಅಂಜನಮೂರ್ತಿ
3. ಎ.ಟಿ. ರಾಮಸ್ವಾಮಿ
4. ಆರಗ ಜ್ಞಾನೇಂದ್ರ
5. ಜಗದೀಶ್ ಶೆಟ್ಟರ್
6. ಕೆ. ಜಯಪ್ರಕಾಶ್ ಹೆಗ್ಡೆ

5. ಸಭೆಯ ಮುಂದಿಡಲಾದ ಕಾಗದಪತ್ರಗಳು

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿ) :

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿ) ಅವರ ಪರವಾಗಿ : ಮಾನ್ಯ

ಅಧ್ಯಕ್ಷರೆ.

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5) ನೇ ಪ್ರಕರಣದ ಮೇರೆಗೆ :

1. ಬೆಳಗಾಂ ಜಿಲ್ಲಾ ಪಂಚಾಯತ್‌ರ 1999–2000ನೇ ಹಾಗೂ 2000–01ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಬೆಳಗಾಂ ಜಿಲ್ಲಾ ಪಂಚಾಯತ್‌ನ 2002–2003ನೇ ಸಾಲಿನ ವಾರ್ಷಿಕ ವರದಿ.

3. ಕೊಡಗು ಜಿಲ್ಲಾ ಪಂಚಾಯತ್‌ನ (ಮಡಿಕೇರಿ) 2002–03ನೇ ಸಾಲಿನ ವಾರ್ಷಿಕ ವರದಿ.

4. ಚಾಮರಾಜನಗರ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ವರದಿ.

5. ಮಂಡ್ಯ ಜಿಲ್ಲಾ ಪಂಚಾಯತ್‌ನ 1999–2000ನೇ ಸಾಲಿನ ವಾರ್ಷಿಕ ಪರಿಶೋಧನಾ ವರದಿ.

6. ಮಂಡ್ಯ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ವರದಿ.

7. ಕೊಡುಗು ಜಿಲ್ಲಾ ಪಂಚಾಯತ್, ಕೊಡಗು ಇವರ 1999–2000ನೇ ಸಾಲಿನ ವಾರ್ಷಿಕ ಲೆಕ್ಕತಪಾಸಣಾ ವರದಿ.

8. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 1999–2000ನೇ ಸಾಲಿನ ವಾರ್ಷಿಕ ಲೆಕ್ಕತಪಾಸಣಾ ವರದಿ.

9. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2000–01ನೇ ಸಾಲಿನ ಲೆಕ್ಕತಪಾಸಣ ವರದಿ.

10. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿ.

11. ಕೋಲಾರ ಜಿಲ್ಲಾ ಪಂಚಾಯತ್‌ನ 1999–2000ನೇ ಸಾಲಿನ ಲೆಕ್ಕತಪಾಸಣಾ ವರದಿ.

12. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2002–2003ನೇ ಸಾಲಿನ ವಾರ್ಷಿಕ ವರದಿ.

13. ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ಕಾರವಾರ 1999–2000ನೇ ಸಾಲಿನ ವಾರ್ಷಿಕ ಲೆಕ್ಕತಪಾಸಣಾ ವರದಿ.

14. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 2002–2003ನೇ ಸಾಲಿನ ವಾರ್ಷಿಕ ಆಡಳಿತ ವರದಿ.

15. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 1999–2000ನೇ ಸಾಲಿನ

ವಾರ್ಷಿಕ ಲೆಕ್ಕಪತ್ರ ಹಾಗೂ ತನಿಖಾ ವರದಿ.

ಕಂಪನಿ ಕಾಯಿದೆ 1956ರ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2002–03ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ವರದಿ.

2. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ.

3. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ.

4. ಕರ್ನಾಟಕ ಪಲ್ಪ್‌ವುಡ್ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ.

5. ಮೈಸೂರು ಮ್ಯಾಚ್ ಕಂಪನಿ ನಿಯಮಿತ ಶಿವಮೊಗ್ಗ, 2002–03ನೇ ಸಾಲಿನ ವಾರ್ಷಿಕ ವರದಿ.

1973ರ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಅಧಿನಿಯಮ 19(3) ಮೇರೆಗೆ :

1. ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಬೆಂಗಳೂರು. 2002–03ನೇ ಸಾಲಿನ ವಾರ್ಷಿಕ ವರದಿ

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ :

1. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಭಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

4. ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

5. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕ ತನಿಖಾ ವರದಿ.

6. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

7. ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2003–04ನೇ ಸಾಲಿನ ವಾರ್ಷಿಕ ವರದಿ.

8. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕತಪಾಸಣಾ ವರದಿ.

9. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕತನಿಖಾ ವರದಿ.

10. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ವಾರ್ಷಿಕ ವರದಿ.

11. ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ವಾರ್ಷಿಕ ವರದಿ.

12. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 2003–04ನೇ ಸಾಲಿನ ವಾರ್ಷಿಕ ವರದಿ.

13. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಪ್ರಾಮಾಣಿಕೃತ ಲೆಕ್ಕಗಳು ಮತ್ತು ಲೆಕ್ಕಪರಿಶೋಧನ ವರದಿ.

14. ಹಾಸನ ನಗರಾಭಿವೃದ್ಧಿ ಪ್ರಾಧೀಕಾರದ 2003–04ನೇ ಸಾಲಿನ ವಾರ್ಷಿಕ ವರದಿ.

ಬೆಂಗಳೂರು ಜಲಮಂಡಳಿ 1964ರ ಅಧಿನಿಯಮ 17(1) ಪ್ರಕರಣ ಮೇರೆಗೆ :

1. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಕಾವೇರಿ ಭವನ ಬೆಂಗಳೂರಿನ 2003–04ನೇ ಸಾಲಿನ ಪರಿಷ್ಕೃತ ಆಯವ್ಯಯ ವರದಿ ಮತ್ತು 2004–05ನೇ ಸಾಲಿನ ವಾರ್ಷಿಕ ಆರ್ಥಿಕ ಪಟ್ಟಿ.

ಕರ್ನಾಟಕ ಗೃಹ ಮಂಡಳಿ 1962ರ ಕಾಯ್ದೆಯ ನಿಯಮ 20(2) ಮೇರೆಗೆ :

1. ಕರ್ನಾಟಕ ಗೃಹ ಮಂಡಳಿ ಬೆಂಗಳೂರಿನ 2001–02ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ತಪಾಸಣಾ ವರದಿಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ (ಬೃಹತ್, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಅಭಿವೃದ್ಧಿ ಸೌಕರ್ಯ ಸಚಿವರು)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಪರವಾಗಿ) : ಮಾನ್ಯ ಅಧ್ಯಕ್ಷರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 1956ರ ಅಧಿನಿಯಮ 33(2),34(2). ಹಾಗೂ 35ರ ಪ್ರಕರಣದ ಮೇರೆಗೆ :

1. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೇಂದ್ರ ಕಚೇರಿ ಗುಲ್ಬರ್ಗಾ, 2002–2003ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆ ವರದಿ.

2. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಕೇಂದ್ರ ಕಛೇರಿ ಬೆಂಗಳೂರು, 2002–03ನೇ ಸಾಲಿನ ಲೆಕ್ಕ ಪತ್ರಗಳು ಹಾಗೂ ಅಡಿಟ್ ವರದಿಗಳನ್ನು ಮಂಡಿಸುತ್ತಿದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ, ಸಣ್ಣ

ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ. ಕಂಪನಿ ಕಾಯಿದೆಯ 1956ರ 619(ಎ) ಪ್ರಕರಣದ ಮೇರೆಗೆ :

1. ತುಂಗಭದ್ರ ಸ್ಟೀಲ್ ಪ್ರಾಡಕ್ಟ್ಸ್ ಲಿಮಿಟೆಡ್‌ನ 2002–2003ನೇ ಸಾಲಿನ ವಾರ್ಷಿಕ ವರದಿ.

2. ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್ 2001–2002ನೇ ಸಾಲಿನ ವಾರ್ಷಿಕ ವರದಿ.

3. ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಪ್ರೈವೇಟ್ ಲಿಮಿಟೆಡ್ ಬೆಂಗಳೂರು. 2002–03ನೇ ಸಾಲಿನ ವಾರ್ಷಿಕ ವರದಿ.

4. ಎನ್.ಜಿ.ಇ.ಎಫ್., ಹುಬ್ಬಳ್ಳಿ. 2002–03ನೇ ಸಾಲಿನ 14ನೇ ವಾರ್ಷಿಕ ಮತ್ತು ಲೆಕ್ಕಪತ್ರಗಳ ವರದಿ.

5. ಎನ್.ಜಿ.ಎಫ್., ಬೆಂಗಳೂರು., 2002–03ನೇ ಸಾಲಿನ 38ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರ.

6. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಡಿ. ಮಂಜನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ. 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 45(2). 47(4) ನೇ ಪ್ರಕರಣದ ಮೇರೆಗೆ :

3. ಬೆಂಗಳೂರು ವಿಶ್ವವಿದ್ಯಾನಿಲಯದ 2001–02ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

4. ಮಂಗಳೂರು ವಿಶ್ವ ವಿದ್ಯಾನಿಲಯದ ಮಂಗಳ ಗಂಗೋತ್ರಿ. 2002–03ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು :

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು ಪರವಾಗಿ) : ಮಾನ್ಯ ಅಧ್ಯಕ್ಷರೆ,

ಕಂಪನಿ ಕಾಯಿದೆಯ 1956ರ 619(ಎ) ಪ್ರಕರಣದ ಮೇರೆಗೆ :

2. ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತದ 2002–03ನೇ ಸಾಲಿನ 4ನೇ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು :

ಶ್ರೀ. ಕೆ. ಶ್ರೀನಿವಾಸ ಗೌಡ (ಕೃಷಿಸಚಿವರು ಪರವಾಗಿ) : ಮಾನ್ಯ ಅಧ್ಯಕ್ಷರೆ. ಕಂಪನಿ ಕಾಯಿದೆಯ 1956ರ 619(ಎ) ಪ್ರಕರಣದ ಮೇರೆಗೆ :

4. ಕರ್ನಾಟಕ ಆಗ್ರೋ ಪ್ರೋಟೀನ್ ಲಿಮಿಟೆಡ್‌ನ 2002–03ನೇ ಸಾಲಿನ ವಾರ್ಷಿಕ ವರದಿ.

5. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ.

6. ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಪ್ರಾಡೆಕ್ಟ್ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಮೀರಾಜುದ್ದೀನ್ ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) : ಮಾನ್ಯ ಅಧ್ಯಕ್ಷರೆ,

ಕಂಪನಿ ಕಾಯಿದೆಯ 1956ರ 619(ಎ) ಪ್ರಕರಣದ ಮೇರೆಗೆ ;

2. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು. 2000–01ನೇ ಮತ್ತು 2001–02ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಜಿ. ಪರಮೇಶ್ವರ್‌ರವರು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ನಿರ್ಣಯದ ಬಗ್ಗೆ ಮಾತನಾಡಬೇಕು.

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ನೇಕಾರರ ಸಮಸ್ಯೆ ಬಗ್ಗೆ

ಶ್ರೀ ಕಾರಜೋಳ ಗೋವಿಂದ್ ಮಕಟಪ್ಪ (ಮುಧೋಳ) : ಮಾನ್ಯ ಅಧ್ಯಕ್ಷರೆ, ನೇಕಾರರ ಸಮಸ್ಯೆ ಬಗ್ಗೆ ಚರ್ಚಿಸಲಿಕ್ಕೆ ತಮ್ಮಲ್ಲಿ ವಿನಂತಿಸಿಕೊಂಡಿದ್ದೆ. ತಾವು ಅರ್ಧ ಗಂಟೆಗಳ ಕಾಲ ನೇಕಾರರ ಸಮಸ್ಯೆ ಬಗ್ಗೆ ಚರ್ಚಿಸಲಿಕ್ಕೆ ತಮ್ಮಲ್ಲಿ ವಿನಂತಿಸಿಕೊಂಡಿದ್ದೆ. ತಾವು ಅರ್ಧ ಗಂಟೆಗಳ ಕಾಲ ಸಮಯವನ್ನು ನಿಗದಿ ಮಾಡುತ್ತೇನೆಂದು ಹೇಳಿದ್ದಿರಿ. ದಯವಿಟ್ಟು ಅದನ್ನು ಈಗ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ತಾವು ಅನುಮತಿ ಕೊಡಬೇಕು.

ಅಧ್ಯಕ್ಷರು : ಈ ಬಗ್ಗೆ ತಾವು ಚರ್ಚೆ ಮಾಡುವುದಕ್ಕೆ ನಿಯಮ 69ರ ಅಡಿಯಲ್ಲಿ ನೋಟೀಸ್ ಕಳುಹಿಸಿದ್ದೀರಿ. ಅದನ್ನು ಪರಿಶೀಲನೆ ಮಾಡಿ ನಾಳೆ ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕಾರಜೋಳ ಗೋವಿಂದ್ ವೆಂಕಟಪ್ಪ : ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಏಕೆಂದರೆ ರಾಜ್ಯದಲ್ಲಿ 40 ಸಾವಿರ ಕೈಮಗ್ಗಗಳು ಇವೆ. ಆ ಕೈಮಗ್ಗದ್ದ ಮೇಲೆ ಅವಲಂಬಿತವಾದಂಥ ಜನ ಬದುಕುವುದಕ್ಕೆ ಆಗದೆ ಸಾಯುವಂಥ ಪರಿಸ್ಥಿತಿಯಲ್ಲಿ ಇದ್ದಾರೆ. ಅದಕ್ಕೆ ಅದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು.

ಅಧ್ಯಕ್ಷರು : ಈಗಾಗಲೇ ಒಂದು ವಿಷಯದ ಬಗ್ಗೆ ಇವತ್ತು ನಿಯಮ 69ರ ಚರ್ಚೆಗೆ ಇದೆ. ಆದ್ದರಿಂದ ತಮಗೆ ನಾನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ